## <u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>

ಸಿ.ಸಿ. ನಂಬರ 325/2021

ಸಿಡಬ್ಲ್ಯೂ- 8/ ಪಿಡಬ್ಲ್ಯೂ-3

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಿವಾಜಿ |
| ತಂದೆ ಹೆಸರು | ಃ | ಮೇಗಪ್ಪ ಲಮಾಣಿ |
| ವಯಸ್ಸು | ಃ | 65 ವರ್ಷ |
| ವೃತ್ತಿ | ಃ | ರೈತಾಪಿ |
| ವಾಸ್ತವ್ಯ | ಃ | ಭದ್ರಾಪುರ, ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 11-02-2025.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ನನ್ನ ಕಣ್ಣಮುಂದೆ ಯಾವುದೇ ಅಪಘಾತ ಆಗಿರುವುದಿಲ್ಲ. ನನಗೆ ಆರೋಪಿ ಪರಿಚಯ ಇಲ್ಲ. ನಾನು ಯಾರ ಸಮಕ್ಷಮವೂ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಸಾಕ್ಷಿಯು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.</u>**

ದಿಃ 15-12-2020 ರಂದು ನಾನು ಮಳಗಿಗೆ ಹೋಗಿ ವಾಪಾಸ್ಸು ನಮ್ಮ ಊರಿಗೆ ಹೋಗುವಾಗ ಮಧ್ಯಾಹ್ನ 12-30 ಗಂಟೆ ಸುಮಾರಿಗೆ ನನ್ನ ಕಣ್ಣೆದುರಿಗೆ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಮೃತ ವಿರೇಶ ವಿರುಪಾಕ್ಷಪ್ಪ ಹಾವಣಾರ ಇವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಅತಿವೇಗ ಮತ್ತು ನಿಷ್ಕಾಳಜಿತನದಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದಾಗಿ ವಿರೇಶ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಲ್ಲಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಲ್ಲಿ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಂ.ಪ್ರ.ಸಂ. ಕಲಂ 160 ರಡಿಯಲ್ಲಿ ದಾಖಲಿಸಿಕೊಂಡ ಸಾಕ್ಷಿದಾರರ ಹೇಳಿಕೆಯನ್ನು **ನಿಪಿ8** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

**-Sd-**

**ಪ್ರ.ದ .ನ್ಯಾ.ದಂ . ಮುಂಡಗೋಡ.**

**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**

ಸಿ.ಸಿ. ನಂಬರ 325/2021

ಸಿಡಬ್ಲ್ಯೂ- 6/ ಪಿಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸುರೇಶ |
| ತಂದೆ ಹೆಸರು | ಃ | ತಿಪ್ಪಣ್ಣ ಇಂಗಳಕಿ |
| ವಯಸ್ಸು | ಃ | 50 ವರ್ಷ |
| ವೃತ್ತಿ | ಃ | ರೈತಾಪಿ |
| ವಾಸ್ತವ್ಯ | ಃ | ರಾಮಾಪುರ, ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 11-02-2025.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಸುಮಾರು 7-8 ವರ್ಷಗಳ ಹಿಂದೆ ನಾನು ಮಳಗಿಗೆ ಹೋಗುವಾಗ ಸಾಕಷ್ಟು ಜನರು ಸೇರಿದ್ದರು, ನಾನು ಅದನ್ನು ನೋಡಿದೆ. ಅಲ್ಲಿ ಅಪಘಾತವಾದ ಬಗ್ಗೆ ಜನರು ಹೇಳುತ್ತಿದ್ದರು. ನಾನು ಕಣ್ಣಾರೆ ಅಪಘಾತವನ್ನು ನೋಡಿರುವುದಿಲ್ಲ. ನಾನು ಅಲ್ಲಿ ಇರಲಿಲ್ಲ, ನಾನು ಅಲ್ಲಿಂದ ಮಳಗಿಗೆ ಹೊರಟು ಹೋದೆ. ನಾನು ಯಾರ ಸಮಕ್ಷಮವೂ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಆರೋಪಿಯನ್ನು ನೋಡಿರುವುದಿಲ್ಲ.

**(ಸಾಕ್ಷಿಯು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ದಿಃ 15-12-2020 ರಂದು ನನ್ನ ಕಣ್ಣಮುಂದೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಅತಿವೇಗ ಮತ್ತು ನಿಷ್ಕಾಳಜಿತನದಿಂದ ಅಪಘಾತ ಪಡಿಸಿ, ವಿರೇಶ ವಿರುಪಾಕ್ಷಪ್ಪ ಹಾವಣೂರ ಎನ್ನವವರ ಸಾವಿಗೆ ಕಾರಣರಾಗಿರುತ್ತಾನೆ ಎಂದರೆ ನಾನು ನೋಡಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುತ್ತೇನೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ, ನನಗೆ ಎಲ್ಲಾ ವಿಷಯ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಂ.ಪ್ರ.ಸಂ. ಕಲಂ 160 ರಡಿಯಲ್ಲಿ ದಾಖಲಿಸಿಕೊಂಡ ಸಾಕ್ಷಿದಾರರ ಹೇಳಿಕೆಯನ್ನು **ನಿಪಿ9** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

**-Sd-**

**ಪ್ರ.ದ .ನ್ಯಾ.ದಂ . ಮುಂಡಗೋಡ.**

**<u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>**

ಸಿ.ಸಿ. ನಂಬರ 325/2021

ಸಿಡಬ್ಲ್ಯೂ-7/ ಪಿಡಬ್ಲ್ಯೂ-5

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಜ್ಜಪ್ಪ |
| ತಂದೆ ಹೆಸರು | ಃ | ರುದ್ರಪ್ಪ ಹರಿಜನ |
| ವಯಸ್ಸು | ಃ | 36 ವರ್ಷ |
| ವೃತ್ತಿ | ಃ | ರೈತಾಪಿ |
| ವಾಸ್ತವ್ಯ | ಃ | ಗೊಟಗೋಡಿಕೊಪ್ಪ, ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 11-02-2025.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ಸುಮಾರು 5-6 ವರ್ಷಗಳ ಹಿಂದೆ ನಾನು ಮಳಗಿಗೆ ರೇಶನ್ ತರಲು ಹೋಗುತ್ತಿರುವಾಗ ಸಾಕಷ್ಟು ಜನರು ಸೇರಿದ್ದರು, ಪೊಲೀಸರು ನನ್ನನ್ನು ಕರೆದು ಸಹಿ ಮಾಡಲು ಹೇಳಿದ್ದು, ನಾನು ಏಕೆ ಎಂದು ಕೇಳಿದೆ, ಆಗ ಪೊಲೀಸರು ನನಗೆ ಸಹಿ ಮಾಡಲು ಹೇಳಿದರು ನಾನು ಸಹಿ ಮಾಡಿರುತ್ತೇನೆ. ಪೊಲೀಸರು ಬಿಳಿ ಹಾಳೆಯ ಮೇಲೆ ನನ್ನ ಸಹಿಯನ್ನು ಮಾಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಮೊದಲು ನೋಡಿರುವುದಿಲ್ಲ. ನಾನು ಯಾರ ಸಮಕ್ಷಮವೂ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಸಾಕ್ಷಿಯು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.</u>**

ದಿಃ 15-12-2020 ರಂದು ನನ್ನ ಕಣ್ಣಮುಂದೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಅತಿವೇಗ ಮತ್ತು ನಿಷ್ಕಾಳಜಿತನದಿಂದ ಅಪಘಾತ ಪಡಿಸಿ, ವಿರೇಶ ವಿರುಪಾಕ್ಷಪ್ಪ ಹಾವಣೂರ ಎನ್ನುವವರ ಸಾವಿಗೆ ಕಾರಣರಾಗಿರುತ್ತಾನೆ ಎಂದರೆ ನಾನು ನೋಡಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುತ್ತೇನೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ, ನನಗೆ ಎಲ್ಲಾ ವಿಷಯ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಂ.ಪ್ರ.ಸಂ. ಕಲಂ 160 ರಡಿಯಲ್ಲಿ ದಾಖಲಿಸಿಕೊಂಡ ಸಾಕ್ಷಿದಾರರ ಹೇಳಿಕೆಯನ್ನು **ನಿಪಿ10** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

**-Sd-**

**ಪ್ರ.ದ .ನ್ಯಾ.ದಂ . ಮುಂಡಗೋಡ.**